(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಎಲ್ಲಾ ವ್ಯಾಪಾರಸ್ಥರು, ರೈತರು ಕೂಗುತ್ತಿದ್ದಾರೆ, ಸರ್ಕಾರ ಕಣ್ಮುಚ್ಚಿಕೊಂಡು ಕುಳಿತಿದೆ.

ಉಪಾಧ್ಯಕ್ಷಣಿಯವರು:- ನೀವು ಯಾವ ಸಬ್ಜೆಕ್ಟ್ ಬೇಲೂ ಮಾತನಾಡುತ್ತಿಲ್ಲ. ಇರಿಗೇಷನ್‌ನಿಂದ ಇನ್ನೆಲ್ಲಿಗೊ ಹೋದಿರಿ. ಬೇಡಿಕೆಗಳು ಬಂದಾಗ ತಾವು ಏನು ಬೇಕಾದರೂ ಪ್ರಸ್ತಾಪ ಮಾಡಿ. ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇವತ್ತು, ನಾಳೆ, ನಾಡಿದ್ದು ಎಲ್ಲಾ ಇದೆ. ಆಗ ತಾವು ಏನು ಬೇಕಾದರೂ ಮಾತನಾಡಬಹುದು. ಈ ರೀತಿ ನೀವು ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಜಿ. ಎಸ್. ಆಚಾರ್:- ಮಾನ್ಯ ಉಪಾಧ್ಯಕ್ಷಣಿಯವರೆ:-

ಅ) ಕುಂದಾಪುರ ತಾಲ್ಲೂಕಿನ ಕೊಲ್ಲೂರು ನೇರಳೇಕಟ್ಟೆ ರಸ್ತೆಗೆ ಡಾಂಬರೀಕರಣಗೊಳಿಸುವ ಬಗ್ಗೆ,

ಆ) ಉಪ್ಪಿನ ಕುದುರು ಗ್ರಾಮಕ್ಕೆ ಪ್ರೌಢ ಶಾಲೆಯನ್ನು ಮಂಜೂರ್ಮಾಡುವ ಬಗ್ಗೆ,

ಇ) ಶಿರೂರಿನಲ್ಲಿ ಚಿಕ್ಕ ಬಂದರು ಮತ್ತು ಮಂಜುಗಡ್ಡೆ ಕಾರ್ಖಾನೆ ಸ್ಥಾಪಿಸೆ ಬಗ್ಗೆ,

ಈ) ಗ್ರಾಮ ಲೆಕ್ಕಿಗರ ಸ್ವಾಧೀನದಲ್ಲಿರುವ ಆರ್. ಟಿ. ಸಿ. ಪುಸ್ತಕಗಳನ್ನು ತಹಶೀಲ್ದಾರರ ವಶಕ್ಕೆ ಕೊಡುವ ಬಗ್ಗೆ,

ಉ) ಹೇರೂರು ರಸ್ತೆಯು ಅಪೂರ್ಣವಾಗಿದ್ದು ಅದನ್ನು ಪೂರ್ಣಗೊಳಿಸುವ ಬಗ್ಗೆ.

ಉಪಾಧ್ಯಕ್ಷಣಿಯವರು:- ಅರ್ಜಿಗಳನ್ನು ಒಪ್ಪಿಸಲಾಯಿತು.

(ಮಾನ್ಯ ಸದಸ್ಯರಾದ ಈಶ್ವರಪ್ಪನವರು ಮಾತನಾಡುತ್ತಿದ್ದರು.)

ಉಪಾಧ್ಯಕ್ಷಣಿಯವರು:- ತಾವು ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. I have called him and he has presented the petitions. ಈಗ ೩೩ಳನೇ ನಿಯಮದ ಮೇರೆಗೆ ಬರುವ ವಿಷಯಗಳು. ಶ್ರೀಯುತ ಇಸಾಮಿಯ ಅವರು.

ಶ್ರೀ ಡಿ. ಬಿ. ಗಂಗಪ್ಪ:- ಪ್ರತಿಯೊಬ್ಬ ರೈತರೂ ೩೦೦ರಿಂದ ೫೦೦ ಎಕರೆವರೆಗೆ ಶೇಂಗಾ ಬೆಳೆದುಕೊಂಡು ಬಹಳ ಸಂತೋಷದಿಂದ ಇದ್ದಾರೆ. ರೈತರಿಗೆ ಕಷ್ಟ ಆಗಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು:- ಮಾನ್ಯ ಈಶ್ವರಪ್ಪನವರೇ, ಏನಾದರೂ ನೀವು ಮಾತನಾಡಬೇಕಾದರೆ ಯಾವ ವಿಷಯದಲ್ಲಿ ತಾವು ಮಾತನಾಡುತ್ತೀರಿ ಎಂಬುದನ್ನು ನನಗೆ ತಿಳಿಸಿ ಮಾತನಾಡಬೇಕು. ಎಲ್ಲಾ ವಿಷಯ ತೆಗೆದುಕೊಂಡು ಮಾತನಾಡುವುದಾದರೆ ಇಲ್ಲಿ ಸಭೆ ನಡೆಸುವುದಕ್ಕಾಗುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಡಿಮ್ಯಾಂಡ್ಸ್ ಮೇಲೆ ಮಾತನಾಡುತ್ತೇನೆ ಎಂದರೆ ಖಂಡಿತ

ತಮಗೆ ಅವಕಾಶ ಕೊಡುತ್ತೇನೆ.

(ಮತ್ತೆ ಶ್ರೀ ಈಶ್ವರಪ್ಪನವರು ಮಾತನಾಡುತ್ತಿದ್ದರು)

ಉಪಾಧ್ಯಕ್ಷಣೆಯವರು:- ತಾವು ಕುಳಿತುಕೊಳ್ಳಬೇಕು.

೩೩೪ ನಿಯಮದ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಭದ್ರಾವತಿ ಹಳೇ ನಗರಕ್ಕೆ ನೀರು ಪೂರೈಕೆ ಯೋಜನೆ ಕಾರ್ಯಗತಗೊಳಿಸುವ ಬಗ್ಗೆ

ಶ್ರೀ ಎಸ್. ಇಸಾಮಿಯಾ (ಭದ್ರಾವತಿ):- ಮಾನ್ಯ ಅಧ್ಯಕ್ಷರೇ, ಭದ್ರಾವತಿ ಹಳೇ ನಗರ ಪುರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ದಿನೇ ದಿನೇ ಹೆಚ್ಚಾಗುತಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಈಗಾಗಲೇ ೨ನೇ ಹಂತದ ನೀರು ಸರಬರಾಜು ಯೋಜನೆಗೆ ಅಂದಾಜು ಪಟ್ಟಿ ೧೯ ಲಕ್ಷ ರೂಪಾಯಿಗಳಿಗೆ ತಯಾರಾಗಿದ್ದು ಸರ್ಕಾರದಿಂದ ಇದುವರೆಗೂ ಕಾರ್ಯಗತವಾಗಿರುವುದಿಲ್ಲ. ಆದ್ದರಿಂದ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸುತ್ತಾರೆ? ಯಾವಾಗ ಕಾರ್ಯಗತವಾಗಿ ಜನರಿಗೆ ನೀರು ಪೂರೈಕೆಯಾಗುತ್ತದೆ ಎಂಬುದರ ಬಗ್ಗೆ ಸಂಬಂಧಪಟ್ಟ ವಸತಿ ಮತ್ತು ನಗರಾಭಿವೃದ್ಧಿ ಸಚಿವರಿಂದ ಉತ್ತರವನ್ನು ಕೊಡಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೇ, ಡೀಟೈಲ್ಸ್ ತರಿಸಲಿಕ್ಕೆ ಹೇಳಿದ್ದೇನೆ. ಆದಷ್ಟು ಬೇಗನೆ ಭದ್ರಾವತಿ ಕುಡಿಯುವ ನೀರಿನ ವಿಚಾರದಲ್ಲಿರುವ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷಣೆಯವರು:- ಶ್ರೀಯುತ ಗಂಗಾಧರ ಗೌಡರು ...

ಶ್ರೀ ಕೆ. ಎಸ್. ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಸಿಕ್ಕಿಲ್ಲ

Madam Deputy Speaker:- I have already gone further.

ಶ್ರೀ ಕೆ. ಎಸ್. ಈಶ್ವರಪ್ಪ:- ರೈತರ ಸಮಸ್ಯೆ ಬಗ್ಗೆ ಸರ್ಕಾರಕ್ಕೆ ಚರ್ಚೆ ಮಾಡುವುದಕ್ಕೆ ಆಸಕ್ತಿ ಇಲ್ಲವಾ ಹಾಗಾದರೆ? ಹೆಂಡದ ದೊರೆಗಳ ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಏನು ಹೇಳಿದ್ರಿ? There must be some limit. This is too much on the part of the Hon'ble member here. ಮಾತನಾಡುವುದಕ್ಕೆ ಒಂದು ಮಿತಿ ಇರಬೇಕು. ವ್ಯಾಪಾರಸ್ಥರ ಹಡಬೆ ದುಡ್ಡು ತಿನ್ನುವುದು, ಇಲ್ಲಿ ಬಂದು ರಾಜಕೀಯ ಮಾಡುವುದು. ನಾಚಿಕೆಯಾಗಬೇಕು. ಹೆಂಡದ ದೊರೆಗಳು ಎಂದು ಮಾತನಾಡುತ್ತಾರೆ. ಮನಸ್ಸಿಗೆ ಬಂದಹಾಗೆ ಮಾತನಾಡುತ್ತಾರೆ. I know you people. You BJP fellows. I know everybody. ನನ್ನ ಹತ್ತಿರ ಬಾಲ ಬಿಚ್ಚುವುದು ಬೇಡ. ರೈತರು ನಿಮ್ಮ ಅಪ್ಪನ ಮನೆ ಆಸ್ತಿ ಅಲ್ಲ. ಯಾವ ರೈತರು? ಯಾವ ಜಮೀನಿನಲ್ಲಿ ಕೆಲಸ ಮಾಡಿದ್ದೀರಿ? ಎಲ್ಲಿ ಹೋಗಿ ಕೆಲಸ ಮಾಡಿದ್ದೀರಿ? ಎಲ್ಲಿ ನೇಗಿಲು ಹೊತ್ತಿದ್ದೀರ? ಬೇರೆಯವರನ್ನು ಕಟ್ಟಿಕೊಂಡು ರಾಜಕೀಯ